ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಮಂಗಳವಾರ, ದಿನಾಂಕ : 10 ನೇ ಮಾರ್ಚ್, 2020

ಸ್ಟೋನ್ ಕ್ರಷರ್‌ಗಳ ಕುರಿತು

ಡಾ: ವೈ. ಎ. ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):-

518 (745) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕೋಲಾರ ಜಿಲ್ಲೆಯಲ್ಲಿ ನಡೆಯುತ್ತಿರುವ ಸ್ಟೋನ್ ಕ್ರಷರ್‌ಗಳ ಸಂಖ್ಯೆ ಎಷ್ಟು ; ಅವು ಯಾವುವು ; (ತಾಲ್ಲೂಕುವಾರು ಪಟ್ಟಿ ನೀಡುವುದು)

(ಆ) ಇವುಗಳಲ್ಲಿ ಸರ್ಕಾರದಿಂದ ಪರವಾನಗಿ ಪಡೆದು ನಿಯಮಾನುಸಾರ ನಡೆಯುತ್ತಿರುವ ಸ್ಟೋನ್ ಕ್ರಷರ್‌ಗಳ ಸಂಖ್ಯೆ ಎಷ್ಟು ; ಹಾಗೂ ನಿಯಮಬಾಹಿರವಾಗಿ ನಡೆಯುತ್ತಿರುವ ಸ್ಟೋನ್ ಕ್ರಷರ್‌ಗಳ ಸಂಖ್ಯೆ ಎಷ್ಟು ;

(ಇ) ನಿಯಮಾನುಸಾರ ನಡೆಯುತ್ತಿರುವ ಸ್ಟೋನ್ ಕ್ರಷರ್‌ಗಳಿಂದ ಕಳೆದ 5 ವರ್ಷಗಳಿಂದ ವಾರ್ಷಿಕ ಆದಾಯ ಎಷ್ಟು ; (ಸ್ಟೋನ್ ಕ್ರಷರ್‌ವಾರು ವಿವರಗಳನ್ನು ನೀಡುವುದು)

(ಈ) ಸ್ಟೋನ್ ಕ್ರಷರ್‌ಗಳು ಸರ್ಕಾರಕ್ಕೆ ಬಾಕಿ ಉಳಿಸಿಕೊಂಡಿರುವ ಮೊತ್ತ/ರಾಜಧನ ಎಷ್ಟು ; (ಕ್ರಷರ್‌ವಾರು ವಿವರಗಳನ್ನು ನೀಡುವುದು)

(ಉ) ಬಾಕಿ ಹಣವನ್ನು ವಸೂಲು ಮಾಡದೇ ಇರಲು ಕಾರಣಗಳು ಏನು; ಹಾಗೂ ಈ ಅವ್ಯವಹಾರದಲ್ಲಿ ಶಾಮೀಲಾಗಿರುವವರ ಮೇಲೆ ಕೈಗೊಂಡಿರುವ ಕ್ರಮವೇನು ?